**ಯುವಕ:** ಬಸ್ ನಿಲ್ದಾಣದಲ್ಲಿ ಗಂಟೆಗಟ್ಟಲೇ ನಿಂತ್ರೂ ಬಸ್ಸು ಬರ್ಲಿಲ್ಲ. ಸೆಕೆಯಿಂದ ಜೀವ ಹೋಗ್ತಿತ್ತು. ಅದ್ಕೆ ಬಿ.ಎಂ.ಡಬ್ಲ್ಯು. ತಗೊಂಡೆ!
**ಯುವತಿ:** ಓಹ್, ಬಿ.ಎಂ.ಡಬ್ಲ್ಯು! ಅಷ್ಟೊಂದು ಹಣ ಎಲ್ಲಿಂದ ಬಂತು ನಿಂಗೆ?
**ಯುವಕ:** ಸ್ವಲ್ಪ ತಾಳು. ನಾನು ತಗೊಂಡಿದ್ದು 'ಬಿಸ್ಲೇರಿ ಮಿನರಲ್ ವಾಟರ್' (ಬಿ.ಎಂ.ಡಬ್ಲ್ಯು.)

***

**ಅಪ್ಪ:** ನಿನ್ನ ರಿಸಲ್ಟ್ ಏನಾಯ್ತು?
**ಮಗ:** 80 ಪರ್ಸೆಂಟ್ ಬಂದಿದೆ.
**ಅಪ್ಪ:** ಆದರೆ ರಿಸಲ್ಟ್ ಶೀಟ್‌ನಲ್ಲಿ ಕೇವಲ 40 ಪರ್ಸೆಂಟ್ ಅಂತ ಇದ್ಯಲ್ಲ?
**ಮಗ:** ಅದಾ... ಆಧಾರ ಲಿಂಕ್ ಆದ ಮೇಲೆ ಬಾಕಿ 40 ಪರ್ಸೆಂಟ್ ಮಾರ್ಕ್ಸ್ ನೇರವಾಗಿ ನನ್ನ ಅಕೌಂಟ್‌ಗೆ ಜಮೆಯಾಗುತ್ತೆ.

***

**ಇವನು:** ನಾನು, ನನ್ನ ಗರ್ಲ್‌ಫ್ರೆಂಡ್ ಮದುವೆ ಆಗ್ತಾ ಇದ್ದೀವಿ. ತಪ್ಪದೆ ಬರ್ಬೇಕು.
**ಅವನು:** ಕಂಗ್ರ್ಯಾಟ್ಸ್. ಮದುವೆ ಯಾವಾಗ?
**ಇವನು:** ನಂದು ಆ. 20ಕ್ಕೆ, ಅವ್ಳದ್ದು ಆ. 24ಕ್ಕೆ.

***

**ತಂದೆ:** ವರ್ಷಗಳ ಹಿಂದೆ ಕೇವಲ 100 ರೂಪಾಯಿಯಲ್ಲಿ ಇಡೀ ತಿಂಗಳಿಗೆ ಸಾಲುವಷ್ಟು ದಿನಸಿ ತರುತ್ತಿದ್ದೆ.
**ಮಗ:** ಈಗೇಕೆ ಅದು ಸಾಧ್ಯವಾಗ್ತಿಲ್ಲ?
**ತಂದೆ:** ಕಾಲ ಬದಲಾಗಿದೆ. ಈಗ ಎಲ್ಲ ಅಂಗಡಿಗಳಲ್ಲೂ ಸಿ.ಸಿ.ಟಿ.ವಿ. ಕ್ಯಾಮೆರಾ ಇಟ್ಟವ್ರೆ!

***

**ವಧು ಕಡೆಯವ್ರು:** ನಿಮ್ಮ ಮಗ ಏನ್ ಕೆಲಸ ಮಾಡ್ಕೊಂಡಿದ್ದಾನೆ?
**ವರನ ತಂದೆತಾಯಿ:** ಅವನು ಪೈಲೆಟ್ ಆಗಿದ್ದಾನೆ.
**ವಧು ಕಡೆಯವ್ರು:** ಯಾವ ಏರ್‌ಲೈನ್ಸ್‌ನಲ್ಲಿ?
**ವರನ ತಂದೆತಾಯಿ:** ಮದುವೆಗಳಲ್ಲಿ ಡ್ರೋನ್ ಹಾರಿಸ್ತಾನೆ.

***

**ಸುರೇಶ:** ಗರ್ಲ್‌ಫ್ರೆಂಡ್ ಮುನಿಸಿಕೊಂಡ್ರೆ ಅವಳನ್ನು ಸಂತೋಷಪಡಿಸಲು ಏನ್ ಮಾಡ್ಬೇಕು?
**ನರೇಶ:** ತುಂಬ ಸುಲಭ. ಆಧಾರ್ ಕಾರ್ಡ್‌ನಲ್ಲಿ ಇರುವ ಅವಳ ಫೋಟೊ ತುಂಬ ಸುಂದರವಾಗಿದೆ ಅಂತ ಹೊಗಳು.

***

**ತಾಯಿ:** ಅಪ್ಪನೊಂದಿಗೆ ನದಿ ನೋಡಲು ಹೋಗಿದ್ದ ನೀನು, ಈಗ ಒಬ್ನೆ ಬರ್ತಿದ್ದೀಯಲ್ಲ, ಅಪ್ಪ ಎಲ್ಲಿ?
**ಕಿಟ್ಟು:** ಆ ನದಿಯ ನೀರೇ ನಮ್ಮ ನಲ್ಲಿಯಲ್ಲಿ ಬರೋದು ಅಂತ ಅಪ್ಪ ಹೇಳಿದ್ರು. ಡೌಟ್ ಬಂತು. ಅದಕ್ಕೆ ಟೆಸ್ಟ್ ಮಾಡೋಣ ಅಂತ ಅವ್ರನ್ನ ನದಿಗೆ ತಳ್ಳಿದೆ. ಬೇಗ ನಲ್ಲಿ ತಿರುಗಿಸು. ಅಪ್ಪ ಅದ್ರೊಳಗೆ ಬರ್ತಾರೇನೊ ನೋಡೋಣ.

***

**ಸುಬ್ಬ:** ಪತಿ ಲಿವರ್ ಇದ್ದಂತೆ. ಪತ್ನಿ ಕಿಡ್ನಿ ಇದ್ದಂತೆ. ಒಂದು ವೇಳೆ ಲಿವರ್ ಕೆಟ್ರೆ ಅದರ ಜೊತೆ ಕಿಡ್ನಿಯೂ ಕೆಡುತ್ತೆ. ಆದ್ರೆ ಕಿಡ್ನಿ ಕೆಟ್ರೆ ಲಿವರ್ ಇನ್ನೊಂದು ಕಿಡ್ನಿಯ ಜೊತೆಗೂಡಿ ಕೆಲಸ ಮಾಡುತ್ತೆ!
**ಸುಬ್ಬಿ:** ಅರೆರೆರೆ ಸುಬ್ಬ... ಲಿವರ್ ಜಾಗದಲ್ಲಿ ಕಿಡ್ನಿ, ಕಿಡ್ನಿ ಜಾಗದಲ್ಲಿ ಲಿವರ್ ಊಹೆ ಮಾಡ್ಕೊ!

***

**ಹುಡ್ಗಿ:** ಎಲ್ಲಿದ್ದೀಯಾ?
**ಹುಡ್ಗ:** ಬ್ಯಾಂಕ್‌ನಲ್ಲಿದ್ದೇನೆ?
**ಹುಡ್ಗಿ:** ಹಾಗಾದ್ರೆ ಒಳ್ಳೆದಾಯ್ತು. ಸ್ಮಾರ್ಟ್‌ಫೋನ್ನೆ, ಬಟ್ಟೆ ತಗೊಳ್ಳೋಕೆ ಒಟ್ಟು ₹20000 ಡ್ರಾ ಮಾಡ್ಕೊಂಡು ಬಾ.
**ಹುಡ್ಗ:** ನಾನ್ ಬ್ಲಡ್ ಬ್ಯಾಂಕಿನಲ್ಲಿ ಇದ್ದೀನಿ. ಹಣಕಾಸಿನ ಬ್ಯಾಂಕ್‌ನಲ್ಲಲ್ಲ. ಬೇಕಿದ್ರೆ ಹೇಳು ನಿಂಗೂ ಬ್ಲಡ್ ತರ್ತಿನಿ. ದುಡ್ಡೆಲ್ಲ ತರೋಕೆ ಆಗಲ್ಲ.

***




ನನ್ನ ಹಳೇ ಪ್ರೇಮಿ ಮತ್ತೆ ಸಿಗಬಹುದಾ ನೋಡಿ ಸ್ವಾಮಿ. ನನಗೆ ಇವರ ಕಾಟ ಸಾಕಾಗಿ ಹೋಗಿದೆ!

**ಭಿಕ್ಷುಕ:** ಏನ್ ಸಾರ್, ಮೊದ್ಲೆಲ್ಲ ₹20 ಕೊಡ್ತಿದ್ರಿ. ಆಮೇಲೆ ₹10ಗೆ ಕೊಡ್ತಿದ್ರಿ. ಈಗ ನೋಡಿದ್ರೆ ₹5ಕ್ಕೆ ಬಂದಿದ್ದೀರಿ.
**ಗೃಹಸ್ಥ:** ಏನ್ ಮಾಡ್ಲಪ್ಪ. ಮೊದ್ಲು ಬ್ರಹ್ಮಚಾರಿಯಾಗಿದ್ದೆ. ಆ ಮೇಲೆ ಮದುವೆ ಆಯ್ತು. ಈಗ ಮಗು ಆಗಿದೆ.
**ಭಿಕ್ಷುಕ:** ಹೀಗೋ ಸಮಾಚಾರ. ನನ್ನ ದುಡ್ಡಿನಲ್ಲೇ ನೀವ್ ಮೂವರು ಮಜಾ ಮಾಡ್ತಾ ಇದ್ದೀರ ಅಂತಾಯ್ತು.

ಸಂಗ್ರಹ: ಮುರಲೀಧರ ಕುಲಕರ್ಣಿ, ಬೀದರ್

ಸುಬ್ಬ, 'ನೀನು ಯಾವಾಗ್ಲೂ 'ನಂದು–ನಿಂದು' ಅಂತ ಹೇಳ್ತಾ ಇರ್ತಿಯ. ಹಾಗೆ ಹೇಳ್ಬಾರ್ದು. ನಾವಿಬ್ರು ಒಂದೇ ಜೀವ ಎರಡು ದೇಹ ಇದ್ದಂತೆ. 'ನಂದು–ನಿಂದು' ಅನ್ನೋದ್ರ ಬದ್ಲು ನಮ್ದು ಅನ್ಬೇಕು' ಅಂತ ಸುಬ್ಬಿಗೆ ತಿಳಿಹೇಳ್ದ. ಮರು ದಿನವೇ ಪತ್ನಿ ತನ್ನ ಕಪಾಟಿನಲ್ಲಿ ಏನೋ ಹುಡುಕ್ತಿದ್ಲು. ಅವಳ ಬಳಿಗೆ ಬಂದ ಪತಿ, 'ಏನ್ ಹುಡುಕ್ತಿದ್ದಿಯ' ಅಂತ ಕೇಳ್ದ. ಅದ್ಕೆ 'ನಮ್ ಸೀರೆ' ಅಂದ್ಲು.


# ವಶೀಕರಣ ಸ್ಪೆಷಲಿಸ್ಟ್



ಶ್ರೀರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ
**ಗುರೂಜಿ ಮಹೇಶ್‌ಭಟ್**

ಇಲ್ಲಿದೆ ದೇವಿ ಅಘೋರಿ ಶಕ್ತಿಗಳ ಭಂಡಾರ, ದುಷ್ಟ ಅಘೋಚರ ಶಕ್ತಿಗಳು ಆಡಿಸುವ ಆಟದಿಂದ ಮನುಷ್ಯನು ತಾನು ಬಯಸಿದಂತೆ ಸುಖ ಜೀವನವನನ್ನು ಸಾಧಿಸಲು ಸಿದ್ಧಿಸಾಧಕರ ಸಹಕಾರ, ನಿಮ್ಮ ಜೀವನಕ್ಕೆ ಪ್ರಮುಖವಾದದ್ದು, ಅಂತಹ ಸಿದ್ಧಿಸಾಧಕರಾದ
"ಗುರೂಜಿ ಮಹೇಶ್‌ಭಟ್"
ಇವರಿಂದ ಮಾತ್ರ ಈ ಸಾಧನೆ ಸಾಧ್ಯ

ಇವರು ಕೇರಳ ಬಂಗಾಳಿ, ಅಘೋರಿ, ನಾಗಸಾಧುಗಳ ಋಷಿಮುನಿಗಳ ಬಳಿ ಪ್ರಾಚೀನ ತಾಳೆಗ್ರಂಥದ ರಹಸ್ಯ, ಮಂತ್ರ-ತಂತ್ರ ದೇವಿಶಕ್ತಿ ಕಠೋರ ಸಾಧನೆಯಿಂದ ಯಾಗ ಯಜ್ಞಗಳ ಮೂಲಕ ಸಿದ್ಧಿ ಮಾಡಿಕೊಂಡಿರುತ್ತಾರೆ.

ವಿದ್ಯೆ, ಉದ್ಯೋಗ, ಶತ್ರುಭಯ, ಪ್ರೇಮವಿಚಾರ, ವಿವಾಹ, ಸಂತಾನ, ಮಾಟಮಂತ್ರ, ಶತ್ರುನಾಶ, ಲೈಂಗಿಕ, ಸಂಮ್ಮೋಹಿನಿ, ಜಾಗದ ವಿಚಾರ, ಬಿಸಿನೆಸ್, ವಿದೇಶ ಪ್ರಯಾಣ, ಸಾಲಬಾಧೆ, ಕೋರ್ಟ್‌ಕೇಸ್, ಗುಪ್ತಸಮಸ್ಯೆ, ಇನ್ನಿತರ ಯಾವುದೇ ಕಠಿಣ ಸಮಸ್ಯೆಯಿರಲಿ ಸಿದ್ಧಿಸಾಧನೆಯಿಂದ ಶಾಸ್ತ್ರೀಯ ಪದ್ಧತಿಯಲ್ಲಿ ಕೆಲವೇ ಗಂಟೆಗಳಲ್ಲಿ ಪರಿಹಾರ ಮಾಡುತ್ತಾರೆ.

ವಿಶೇಷ ಸೂಚನೆ: ಜನವಶೀಕರಣ, ಲಕ್ಷ್ಮೀವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರುವಶೀಕರಣಗಳಿಗೆ ಕೆಲವೇ ಗಂಟೆಗಳಲ್ಲಿ ಪರಿಹಾರ.

ನಮ್ಮನ್ನು ಭೇಟಿಯಾಗುವ ಅವಶ್ಯಕತೆಯಿಲ್ಲ ಒಮ್ಮೆ ಕರೆಮಾಡಿ ನಿಮ್ಮೆಲ್ಲ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಪಡೆಯಿರಿ.
ನಮ್ಮಲ್ಲಿ ಕೇಳುವ ನಿಮ್ಮೆಲ್ಲ ವಿಷಯಗಳನ್ನು ಗುಪ್ತವಾಗಿಡಲಾಗುವುದು.
ನಿಮ್ಮ ಸಮಸ್ಯೆಗಳನ್ನು ಯಾರಿಂದಲೂ ಬಗೆಹರಿಸಲು ಸಾಧ್ಯವಿಲ್ಲ. ನಮ್ಮಿಂದ ಮಾತ್ರಸಾಧ್ಯ ಪರಿಹಾರ ಬೇಕಿದ್ದಲ್ಲಿ ಒಮ್ಮೆ ಕರೆಮಾಡಿ

**ಗುರೂಜಿ ಮಹೇಶ್‌ಭಟ್**
**9686999517**